# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ,೧೪, ಡಿಸೆಂಬರ್ , ೨೦೨೦(ಮಾರ್ಗಶಿರ, ೨೩, ಶಕವರ್ಷ ೧೯೪೨)<br>Bengaluru, MONDAY,14,DECEMBER,2020( MARGASHIRA,23, ShakaVarsha 1942) | ನಂ. ೬೯೮<br>No. 698 |
|---|---|---|


## <u>ಕರ್ನಾಟಕ ಸರ್ಕಾರ</u>

ಸಂಖ್ಯೆ : ಕಂಇ/4/ಎಲ್ಆರ್‌ಡಿ/2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:14-12-2020

## <u>ಅ ಧಿ ಸೂ ಚ ನೆ</u>

ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (ಕರ್ನಾಟಕ 1964 ರ ಅಧಿನಿಯಮ, 12) ಕಲಂ 4 ರ ಉಪ ಕಲಂ (4) ಮತ್ತು ಕಲಂ 6 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಹಿಂದೆ ಹೊರಡಿಸಿದ್ದ ಆದೇಶಗಳನ್ನು ಭಾಗಶ: ಮಾರ್ಪಡಿಸಿ, ಜನಸಂಖ್ಯೆ, ಪ್ರದೇಶ, ಭೂಕಂದಾಯ, ಸಾರ್ವಜನಿಕರ ಬೇಡಿಕೆ ಹಾಗೂ ಆಡಳಿತಾತ್ಮಕ ಅನುಕೂಲತೆಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಗಿನ ಪರಿಶಿಷ್ಟಗಳಲ್ಲಿ ಸೂಚಿಸಿರುವಂತೆ ಬಳ್ಳಾರಿ ಜಿಲ್ಲೆಯ ಸರಹದ್ದನ್ನು ವಿಭಜಿಸಿ ಹೊಸಪೇಟೆ ಪಟ್ಟಣವನ್ನು ವಿಜಯನಗರ ಹೊಸ ಜಿಲ್ಲೆಯಾಗಿ ರಚಿಸಲು ಉದ್ದೇಶಿಸಿದೆ.

ಆದುದರಿಂದ, ಮೇಲೆ ಹೇಳಿದ ಅಧಿನಿಯಮದ ಕಲಂ 6 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಸಂಬಂಧದಲ್ಲಿ ಬಾಧಿತರಾಗುವ ವ್ಯಕ್ತಿಗಳಿಗೆ ತಿಳಿಸುವುದೇನೆಂದರೆ, ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಒಂದು ತಿಂಗಳು ಮುಗಿದ ದಿನಾಂಕದಂದು ಅಥವಾ ಅನಂತರ ಈ ಮೇಲಂಕ್ಕಡ ಉದ್ದೇಶವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ಈ ಪ್ರಸ್ತಾವನೆಯ ಸಂಬಂಧ ಯಾವುದೇ ವ್ಯಕ್ತಿಗಳಿಂದ ಆಕ್ಷೇಪಣೆ ಅಥವಾ ಸಲಹೆಗಳು ಸೂಚಿಸಿದ ದಿನಾಂಕದೊಳಗೆ ಸ್ವೀಕೃತವಾದಲ್ಲಿ ಸರ್ಕಾರವು ಅವುಗಳನ್ನು ಪರಿಶೀಲಿಸುವುದು. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಕೊಠಡಿ ಸಂಖ್ಯೆ: 505, ಬಹುಮಹಡಿಗಳ ಕಟ್ಟಡ, ಡಾ: ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು – 560001 ಈ ವಿಳಾಸಕ್ಕೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಹೊಸದಾಗಿ ಸೃಜನೆಯಾಗಿರುವ ವಿಜಯನಗರ ಜಿಲ್ಲೆಗೆ ವಿಜಯನಗರ ವಿಭಾಗ ರಚಿಸುವ ಕುರಿತು.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಅಪಜೀ 296 ಅಲಸೇ 2021, ದಿನಾಂಕ: 27-12-2021.

2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಪತ್ರ ಸಂಖ್ಯೆ: KFD/HOFF/A2(EST)/115/2021, ದಿನಾಂಕ: 28-03-2022.

************

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದನ್ವಯ ನೂತವಾಗಿ ಸೃಜನೆಯಾಗಿರುವ ವಿಜಯನಗರ ಜಿಲ್ಲೆಗೆ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ಒಟ್ಟು 04 ಹುದ್ದೆಗಳನ್ನು ಸೃಜಿಸಿ ಮತ್ತು ಒಟ್ಟು 07 ಹುದ್ದೆಗಳನ್ನು ಬಳ್ಳಾರಿ ಜಿಲ್ಲೆಯಿಂದ ವಿಜಯನಗರ ಜಿಲ್ಲೆಗೆ ಸ್ಥಳಾಂತರಿಸಿ, ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಅವಿಭಜಿತ ಬಳ್ಳಾರಿ ವಿಭಾಗವು ಒಳಗೊಂಡಿರುವ 03 ಉಪ ವಿಭಾಗ ಹಾಗೂ 08 ವಲಯಗಳೊಂದಿಗೆ ಹರಪನಹಳ್ಳಿ ವಲಯವನ್ನು ಸೇರಿಸಿ ಒಟ್ಟು 03 ಉಪ ವಿಭಾಗ ಹಾಗೂ 09 ವಲಯಗಳಲ್ಲಿ ಬಳ್ಳಾರಿ ವಿಭಾಗ ಹಾಗೂ ವಿಜಯನಗರ ವಿಭಾಗವನ್ನು ಈ ಕೆಳಕಂಡಂತೆ ಪುನರ್ ವಿಗಂಡಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ. ಸಂ | ವಿಭಾಗದ ಹೆಸರು | ಉಪ ವಿಭಾಗದ ಹೆಸರು | ವಲಯಗಳ ಹೆಸರು | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಷರಾ |
|---|---|---|---|---|---|
| 01 | ವಿಜಯನಗರ ವಿಭಾಗ | ಹೊಸಪೇಟೆ ಉಪ ವಿಭಾಗ | ಹೊಸಪೇಟೆ ವಲಯ | 23958.275 | ಬಳ್ಳಾರಿ ವಿಭಾಗದಿಂದ ವಿಭಜಿಸಲ್ಪಟ್ಟು ವಿಜಯನಗರ ವಿಭಾಗದ ಆಡಳಿತ ವ್ಯಾಪ್ತಿಗೆ ಸೇರಿಸಲಾಗಿದೆ. |
| | | | ಹೂವಿನ ಹಡಗಲಿ | 14739.279 | |
| | | | ದರೋಜಿ ವನ್ಯಜೀವಿ ವಲಯ | 8275.77 | |
| | | ಕೂಡ್ಲಿಗಿ ಉಪ ವಿಭಾಗ | ಕೂಡ್ಲಿಗಿ ವಲಯ | 30420.91 | |
| | | | ಹರಪನಹಳ್ಳಿ ವಲಯ | 29027.56 | ದಾವಣಗೆರೆ ವಿಭಾಗದಿಂದ ವಿಭಜಿಸಲ್ಪಟ್ಟು ವಿಜಯನಗರ ವಿಭಾಗದ ಆಡಳಿತ ವ್ಯಾಪ್ತಿಗೆ ಸೇರಿಸಲಾಗಿದೆ. |
| | ಒಟ್ಟು | | | 106421.794 | |
| 02 | ಬಳ್ಳಾರಿ ವಿಭಾಗ | ಬಳ್ಳಾರಿ ಉಪ ವಿಭಾಗ | ಬಳ್ಳಾರಿ ವಲಯ | 21684.411 | |
| | | | ಸಂಡೂರು ಉತ್ತರ ವಲಯ | 21669.17 | |
| | | | ಸಂಡೂರು ದಕ್ಷಿಣ ವಲಯ | 20679.07 | |
| | | | ಗುಡೇಕೋಟೆ ಕರಡಿಧಾಮ ವಲಯ | 20788.08 | |
| | ಒಟ್ಟು | | | 84820.731 | |

ಮುಂದುವರೆದು, ವಿಜಯನಗರ ಪ್ರಾದೇಶಿಕ ವಿಭಾಗಕ್ಕೆ ಹೊಸಪೇಟೆಯನ್ನು ಕೇಂದ್ರ ಸ್ಥಾನವನ್ನಾಗಿಸಿ, ಆದೇಶಿಸುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಪ್ರಸ್ತಾಪಿಸಿರುತ್ತಾರೆ.

........2

ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಅಪಜೀ 296 ಅಅಸೇ 2021,**
**ಬೆಂಗಳೂರು, ದಿನಾಂಕ:05-11-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಪ್ರಾದೇಶಿಕ ವಿಭಾಗಗಳನ್ನು ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಠಿಯಿಂದ ಈ ಕೆಳಕಂಡಂತೆ ಪುನರ್ ವಿಂಗಡಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ವಿಜಯನಗರ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಲಯಗಳ ವಿವರ :-

| ಕ್ರ. ಸಂ | ವಿಭಾಗ | ಉಪ ವಿಭಾಗ | ವಲಯದ ಹೆಸರು |
|---|---|---|---|
| 1 | ವಿಜಯನಗರ | ಹೊಸಪೇಟೆ ಉಪ ವಿಭಾಗ | 1. ಹೊಸಪೇಟೆ ವಲಯ |
| | | | 2. ಹೂವಿನ ಹಡಗಲಿ ವಲಯ |
| | | | 3. ದರೋಜಿ ವನ್ಯಜೀವಿ ವಲಯ |
| | | ಕೂಡ್ಲಿಗಿ ಉಪ ವಿಭಾಗ | 4. ಕೂಡ್ಲಿಗಿ ವಲಯ |
| | | | 5. ಗುಡೆಕೋಟೆ ವಲಯ |
| | | | 6. ಹರಪ್ಪನಹಳ್ಳಿ ವಲಯ |

ಬಳ್ಳಾರಿ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಲಯಗಳ ವಿವರ :-

| ಕ್ರ. ಸಂ | ವಿಭಾಗ | ಉಪ ವಿಭಾಗ | ವಲಯದ ಹೆಸರು |
|---|---|---|---|
| 1 | ಬಳ್ಳಾರಿ | ಬಳ್ಳಾರಿ ಉಪ ವಿಭಾಗ | 1. ಬಳ್ಳಾರಿ |
| | | | 2. ಸಂಡೂರು ಉತ್ತರ ವಲಯ |
| | | | 3. ಸಂಡೂರು ದಕ್ಷಿಣ ವಲಯ |

ವಿಜಯನಗರ ಪ್ರಾದೇಶಿಕ ವಿಭಾಗಕ್ಕೆ ಹೊಸಪೇಟೆಯನ್ನು ಕೇಂದ್ರ ಸ್ಥಾನವನ್ನಾಗಿಸಿ, ಆದೇಶಿಸಿದೆ ಹಾಗೂ ಹರಪನಹಳ್ಳಿ ವಲಯವನ್ನು ದಾವಣಗೆರೆ ವಿಭಾಗದಿಂದ ವಿಭಜಿಸಿ, ವಿಜಯನಗರ ವಿಭಾಗಕ್ಕೆ ಸೇರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗೀತಾ ಎಂ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಸೇವೆಗಳು).

ನೋಡಲ್ ಅಧಿಕಾರಿ, ಇ-ಗೆಜೆಟ್ ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು - ರಾಜ್ಯ ಪತ್ರದಲ್ಲಿ ಪ್ರಕಟಿಸಲು.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ & ಎಸ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವೃತ್ತ, ಬಳ್ಳಾರಿ.

.........3

6. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ / ವಿಜಯನಗರ ಜಿಲ್ಲೆ / ದಾವಣಗೆರೆ ಜಿಲ್ಲೆ.
7. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವಿಭಾಗ / ವಿಜಯನಗರ ವಿಭಾಗ / ದಾವಣಗೆರೆ ವಿಭಾಗ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ**:

1. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಜಂಟಿ ಕಾರ್ಯದರ್ಶಿ, (ಸೇವೆಗಳು ಮತ್ತು ಸಮನ್ವಯ)ರವರ ಆಪ್ತ ಸಹಾಯಕರು, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

**ಪರಿಶಿಷ್ಟ-1**

ಕಾಲಂ (4) ತೋರಿಸಿರುವ ತಾಲ್ಲೂಕುಗಳನ್ನು ಕಾಲಂ (2) ರಲ್ಲಿ ತೋರಿಸಿರುವ ಜಿಲ್ಲೆಯಿಂದ ಬೇರ್ಪಡಿಸಿ ಕಾಲಂ (5) ರಲ್ಲಿ ತೋರಿಸಿರುವ ಜಿಲ್ಲೆಯಲ್ಲಿ ಸೇರ್ಪಡೆಯಾಗುವುವು.

| ಕ್ರ. ಸಂ. | ಜಿಲ್ಲೆ | ಕೇಂದ್ರಸ್ಥಾನ | ತಾಲ್ಲೂಕುಗಳು | ಹೊಸ ಜಿಲ್ಲೆ | ಹೊಸ ಕೇಂದ್ರಸ್ಥಾನ |
|---|---|---|---|---|---|
| (1) | (2) | (3) | (4) | (5) | (6) |
| 1 | ಬಳ್ಳಾರಿ | ಬಳ್ಳಾರಿ ನಗರ | (1) ಹೊಸಪೇಟೆ<br>(2) ಕೂಡ್ಲಿಗಿ<br>(3) ಹಗರಿಬೊಮ್ಮನಹಳ್ಳಿ<br>(4) ಕೊಟ್ಟೂರು<br>(5) ಹೂವಿನ ಹಡಗಲಿ<br>(6) ಹರಪನಹಳ್ಳಿ | ವಿಜಯನಗರ | ಹೊಸಪೇಟೆ |

**ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ, ನೂತನವಾಗಿ ರಚಿಸಿರುವ ವಿಜಯನಗರ ಜಿಲ್ಲೆಯ ಚಕ್ಕುಬಂದಿ ವಿವರ:-**

| | |
|---|---|
| ಪೂರ್ವ: ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆ | ಪಶ್ಚಿಮ : ಗದಗ ಮತ್ತು ಹಾವೇರಿ ಜಿಲ್ಲೆ |
| ಉತ್ತರ : ಕೊಪ್ಪಳ ಜಿಲ್ಲೆ | ದಕ್ಷಿಣ : ಹರಿಹರ ಮತ್ತು ದಾವಣಗೆರೆ ತಾಲ್ಲೂಕು,<br>ದಾವಣಗೆರೆ ಜಿಲ್ಲೆ |

**ಪರಿಶಿಷ್ಟ-2**

**ಹೊಸದಾಗಿ ವಿಜಯನಗರ ಜಿಲ್ಲೆಯನ್ನು ರಚಿಸಿದ ನಂತರ ಕಾಲಂ (2) ರಲ್ಲಿ ತೋರಿಸಿರುವ ತಾಲ್ಲೂಕುಗಳು ಕಾಲಂ (1) ರ ಜಿಲ್ಲೆಯಲ್ಲಿ ಉಳಿಯಲಿವೆ.**

| ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು |
|---|---|
| (1) | (2) |
| ಬಳ್ಳಾರಿ | (1) ಬಳ್ಳಾರಿ<br>(2) ಕುರುಗೋಡು<br>(3) ಸಿರಗುಪ್ಪ<br>(4) ಕಂಪ್ಲಿ<br>(5) ಸಂಡೂರು |

**ವಿಜಯನಗರ ನೂತನ ಜಿಲ್ಲೆಯನ್ನು ರಚಿಸಿದ ನಂತರ ಬಳ್ಳಾರಿ ಜಿಲ್ಲೆಯ ಚಕ್ಕುಬಂದಿ ವಿವರ:-**

| | |
|---|---|
| ಪೂರ್ವ: ಆಂಧ್ರ ಪ್ರದೇಶ ರಾಜ್ಯ | ಪಶ್ಚಿಮ : ಹೊಸದಾಗಿ ರಚಿಸಿರುವ ವಿಜಯನಗರ ಜಿಲ್ಲೆ |
| ಉತ್ತರ : ರಾಯಚೂರು ಜಿಲ್ಲೆ | ದಕ್ಷಿಣ : ಆಂಧ್ರ ಪ್ರದೇಶ ರಾಜ್ಯ |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಮೇಲೆ ಸೂಚಿಸಿದ ಪ್ರಸ್ತಾವನೆಯು, ರಾಜ್ಯ ಸರ್ಕಾರವು ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರ (1964 ರ ಕರ್ನಾಟಕ ಅಧಿನಿಯಮ 12) ಕಲಂ 4 ರ ಉಪ ಕಲಂ (4) ರಡಿಯಲ್ಲಿ ಹೊರಡಿಸುವ ಅಂತಿಮ ಅಧಿಸೂಚನೆಯು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸುವ ದಿನಾಂಕದಿಂದ ಜಾರಿಗೆ ಬರುವುದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

**(ವಿ.ಟಿ.ರಾಜ್ಯಶ್ರೀ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಾಪನ)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE
Digitally signed by SUNIL GARDE
Date: 2020.12.14 17:28:01 +05'30'